## ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಪಿರಿಯಾಪಟ್ಟಣ

**ಸಿ.ಸಿ. ಸಂಃ 13/2017**

**ಪಿಡಬ್ಲೂಃ 07**

**ಹೆಸರು** : ಗೀತಾ ಎಂ.ಆರ್.
**ತಂದೆ/ಗಂಡನ ಹೆಸರು** : ರವಿ ಕುಮಾರ್ ಕೆ.ಜಿ.
**ವಯಸ್ಸು** : 50 ವರ್ಷ
**ಉದ್ಯೋಗ** : ಶಿಕ್ಷಕಿ
**ವಾಸಸ್ಥಳ** : ಕುಶಾಲನಗರ

**ದಿಃ*23.02.2024* ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಿದೆ.**

**ಮುಖ್ಯ ವಿಚಾರಣೆಃ ಫಿರ್ಯಾದಿ ಪರ ವಕೀಲರಿಂದಃ**

ನಾನು ಮಿಳಿಂದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜೂನ್ 1999 ರಿಂದ ಸಹ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೇನೆ. ನನ್ನನ್ನು ಕೆಲಸಕ್ಕೆ ಆರೋಪಿ ನೇಮಕ ಮಾಡಿಕೊಂಡಿರುತ್ತಾರೆ. ನಾನು ಶಾಲೆಗೆ ಸೇರಿದಾಗ ಶಾಲೆ ನರ್ಸರಿಯಿಂದ 9 ನೇ ತರಗತಿವರೆಗೆ ಇತ್ತು. ಆಗ ಪ್ರಾಥಮಿಕ ಶಾಲೆಗೆ ಶ್ರೀಮತಿ.ಹೇಮಾವತಿ ರವರು ಮುಖ್ಯೋಪಾಧ್ಯಾಯನಿಯಾಗಿದ್ದರು. ಪ್ರೌಢ ಶಾಲೆಗೆ ಶ್ರೀ.ರಾಜಶೇಖರ ರವರು ಮುಖ್ಯೋಪಾಧ್ಯಾಯರಾಗಿದ್ದರು.

ನಾನು ಶಾಲೆಗೆ ಸೇರಿದಾಗ ನರ್ಸರಿ ಮತ್ತು ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಂದ ಅಭಿವೃತಿ ಶುಲ್ಕ ರೂ.300/- ಗಳನ್ನು ಪಡೆದುಕೊಳ್ಳುತಿದ್ದರು. ಅದರ ಬಗ್ಗೆ ಯಾವುದೇ ರಸೀದಿಯನ್ನು ಕೊಡುತ್ತಿರಲಿಲ್ಲ. ಸಹ ಶಿಕ್ಷಕಿಯಾದ ಜಲಜಾಕ್ಷಿ ರವರು ಹಣವನ್ನು ಸಂಗ್ರಹಿಸಿ ಮುಖ್ಯೋಪಾಧ್ಯಾಯರ ಸಮಕ್ಷಮ ಹಣವನ್ನು ಆರೋಪಿ ರವರಿಗೆ ಹಾಳೆಯಲ್ಲಿ ಬರೆದು ಕೊಡುತ್ತಿದ್ದರು. ಮಾಸಿಕ ಶುಲ್ಕ ರೂ.25/-ಗಳನ್ನು 1 ರಿಂದ 4 ನೇ ತರಗತಿ ವಿದ್ಯಾರ್ಥಿಗಳಿಂದ ಮತ್ತು 5 ರಿಂದ 7 ನೇ ತರಗತಿ ವಿದ್ಯಾರ್ಥಿಗಳಿಂದ ರೂ.30/- ಪಡೆದುಕೊಳ್ಳುತಿದ್ದರು. ಸದರಿ ಹಣವನ್ನು ತರಗತಿಯ ಶಿಕ್ಷಕರು ವಿದ್ಯಾರ್ಥಿಗಳಿಂದ ಸಂಗ್ರಹಿಸಿ

ಶ್ರೀಮತಿ.ಜಲಜಾಕ್ಷಿ ರವರಿಗೆ ಕೊಡುತ್ತಿದ್ದರು. ಅವರು ಸದರಿ ಹಣವನ್ನು ಆರೋಪಿ ಕೊಡುತ್ತಿದ್ದರು. ಹಣ ಕೊಟ್ಟ ಬಗ್ಗೆ ಆರೋಪಿಯವರು ಯಾವುದೇ ರಸೀದಿ ಕೊಡುತ್ತಿರಲಿಲ್ಲ. ನಾನು ಹಣವನ್ನು 2001 ರಿಂದ 2005 ನೇ ಸಾಲಿನ ವರೆಗೆ ಸಂಗ್ರಹ ಮಾಡಿ ಆರೋಪಿ ರವರಿಗೆ ಕೊಟಿರುತ್ತೇನೆ. ಅದಕ್ಕೆ ಅವರು ಯಾವುದೇ ರಸೀದಿ ಕೊಟ್ಟಿರುವುದಿಲ್ಲ. 2006 ನೇ ಸಾಲಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಆಗಿತ್ತು. 2006 ನೇ ಸಾಲಿನಲ್ಲಿ ಶಾಲೆಯ ವೇತನವನ್ನು ಅನುದಾನಕ್ಕೆ ಒಳಪಡಬೇಕಾಗಿತ್ತು, ಆಗ ಮಕ್ಕಳ ಸಂಖ್ಯೆ ಕಡಿಮೆ ಇತ್ತು, ಶಾಲೆಗೆ ವಾಹನ ಸೌಲಭ್ಯ ಮಾಡಿದರೆ ಮಕ್ಕಳ ಸಂಖ್ಯೆ ಹೆಚ್ಚಾಗುತ್ತದೆ ಎಂದು ಆರೋಪಿ ರವರು ಶಿಕ್ಷಕರಾದ ಜಲಜಾಕ್ಷಿ, ಹೇಮಾವತಿ, ಸುಲೋಚನ, ಸುರೇಶ್ ಕುಮಾರ್, ಗೀತಾ ಮತ್ತು ಕೃಷ್ಣ ರವರಿಗೆ ತಲಾ 25 ಸಾವಿರ ಹಣ ಕೊಡಬೇಕು ಎಂದು ಹೇಳಿದರು. ಆ ಪ್ರಕಾರ ನಾನು ಹಣವನ್ನು ಕೊಟ್ಟಿರುತ್ತೇವೆ. ಹಣ ಪಡೆದ ಬಗ್ಗೆ ನಮಗೆ ರಸೀದಿ ಕೊಟ್ಟಿಲ್ಲ. ವಾಹನದ ಸಾಲದ ಕಂತಿಗಾಗಿ ನಾನು ರೂ.99,500/- ಹಣವನ್ನು ಆರೋಪಿ ರವರಿಗೆ ಕೊಟ್ಟಿರುತ್ತೇನೆ.

2009 ರ ಡಿಸೆಂಬರ್ ತಿಂಗಳಿನಲ್ಲಿ ಶಾಲೆಯಲ್ಲಿ ಸಭೆಯನ್ನು ಕರೆದರು. ಸದರಿ ಸಭೆಯಲ್ಲಿ ಆರೋಪಿ ರವರು ಮತ್ತು ವ್ಯವಸ್ಥಾಪಕ ಧರ್ಮದರ್ಶಿಗಳಾದ ಗೋವಿಂದಾಯ್ಯ ಮತ್ತು ಅಡಿಟರ್ ನಾಗನಂದ ಮತ್ತು ಪ್ರಾರ್ಥಮಿಕ ಮತ್ತು ಪ್ರೌಡ ಶಾಲೆಯ ಮುಖ್ಯ ಶಿಕ್ಷಕರು ಮತ್ತು ಎಲ್ಲಾ ಶಿಕ್ಷಕರು ಹಾಜರು ಇದ್ದೇವು. ಸದರಿ ಸಭೆಯಲ್ಲಿ ಕೆಲವು ನಿರ್ಣಯಗಳನ್ನು ತೆಗೆದುಕೊಂಡರು. ಆಡಳಿತ ಮಂಡಳಿ, ಪ್ರೌಡ ಮತ್ತು ಪ್ರಾರ್ಥಮಿಕ ಶಾಲಾ ವಿಭಾಗದವರು ಬ್ಯಾಂಕಿನಲ್ಲಿ 3 ಪ್ರತ್ಯೇಕ ಖಾತೆಗಳನ್ನು ತೆಗೆಯಬೇಕು ಎಂದು ಆಯಿತು. ಅಲ್ಲಿಂದ ನಾವು ಸಂಗ್ರಹಿಸಿದ ಎಲ್ಲಾ ಹಣಕ್ಕೆ ರಸೀದಿ ಕೊಡುತ್ತಿದ್ದೇವು. ನಾವು ಶಾಲೆಯಿಂದ ಕೊಡುವ ಹಣವನ್ನು ಚೆಕ್ಕು ಮೂಲಕ ಕೊಡುತ್ತಿದ್ದೇವು. ಶಿಕ್ಷಕಿಯಾದ ಆಶಾ ರವರನ್ನು ಲೆಕ್ಕಾ ನಿರ್ವಹಣೆಗೆ ಮತ್ತು ಜಲಜಾಕ್ಷಿ ರವರನ್ನು ಶೈಕ್ಷಣಿಕ ಮತ್ತು ಸಾಂಸ್ಕೃತಿಕ ನಿರ್ವಹಣೆಗೆ ಮತ್ತು ಹೇಮಾವತಿ ರವರನ್ನು ಶಾಲಾ

ದಾಸ್ತಾನು ನಿರ್ವಹಣೆಗೆ ನೇಮಿಸಿದರು. ಸದರಿ ಸಭೆಯಲ್ಲಿ ಆದ ತೀರ್ಮಾನದ ಸುತ್ತೋಲೆಯನ್ನು ನಿ.ಪಿ.8 ರ ಪ್ರಕಾರ ನೀಡಿದ್ದಾರೆ. ಅದಕ್ಕೆ ನಾನು ಸಹಿ ಮಾಡಿದ್ದೇನೆ. ಸಾಕ್ಷಿ ಸಹಿ ಗುರುತಿಸಿದ್ದು ಅನ್ನು **ನಿ.ಪಿ.8(ಸಿ)** ಎಂದು ಗುರುತಿಸಲಾಯಿತು. ಆರೋಪಿ ರವರು ಹಣ ಕೊಟ್ಟ ಬಗ್ಗೆ ಜಲಜಾಕ್ಷಿ ರವರು ನಿ.ಪಿ.18 ರಂತೆ ದಾಖಲೆ ಬರೆದಿರುತ್ತಾರೆ. ಅದಕ್ಕೆ ನಾನು ಸಹಿ ಮಾಡಿದ್ದೇನೆ. ಸಾಕ್ಷಿ ಸಹಿ ಗುರುತಿಸಿದ್ದು ಅದನ್ನು **ನಿ.ಪಿ.18(ಸಿ)** ಎಂದು ಗುರುತಿಸಲಾಯಿತು. ನಿ.ಪಿ.18 ರಲ್ಲಿ ನಾನು ಆರೋಪಿ ರವರಿಗೆ ವಾಹನ ಖರೀದಿಗೆ ಕೊಟ್ಟ ರೂ.99,500/- ಗಳ ಬಗ್ಗೆ ನಮೂದು ಇರುತ್ತದೆ. ಸದರಿ ವಿಷಯ ನಾನೇ ಹೇಳಿ ಬರೆಸಿದ್ದೇನೆ.

ಶಾಲಾ ವಾರ್ಷಿಕೋತ್ಸವ ಮತ್ತು ಕ್ರೀಡೆಗಾಗಿ ನಿ.ಪಿ.19 ರಂತೆ ಅರ್ಜಿ ಕೊಟ್ಟಿದ್ದು. ಅದಕ್ಕೆ ನಾನು ಸಹಿ ಮಾಡಿದ್ದೇನೆ. ಸಾಕ್ಷಿ ಸಹಿ ಗುರುತಿಸಿದ್ದು ಅದನ್ನು **ನಿ.ಪಿ.19(ಬಿ)** ಎಂದು ಗುರುತಿಸಲಾಯಿತು. ನಿ.ಪಿ.20(ಎಂ) ನಾನು 2001 ರಿಂದ 2005 ರವರೆಗೆ ಲೆಕ್ಕ ಪತ್ರ ನಿರ್ವಣೆ ಮಾಡಿದ ಬಗ್ಗೆ ದಾಖಲೆ ಇರುತ್ತದೆ. ಅದಕ್ಕೆ ನಾನು ಸಹಿ ಮಾಡಿದ್ದೇನೆ. ಸಾಕ್ಷಿ ಸಹಿ ಗುರುತಿಸಿದ್ದು ಅದನ್ನು **ನಿ.ಪಿ.20(ಕ್ಯೂ)** ಎಂದು ಗುರುತಿಸಲಾಯಿತು.

ವಿಚಾರಣೆ ಅಧಿಕಾರಿಗಳ ಮುಂದೆ ನಾನು ಹೇಳಿಕೆ ಕೊಟ್ಟಿದ್ದೇನೆ. ಅದಕ್ಕೆ ನಾನು ಸಹಿ ಮಾಡಿದ್ದೇನೆ. ಸದರಿ ಹೇಳಿಕೆ ನಿ.ಪಿ.41 ರ ದಾಖಲೆಯಲ್ಲಿ ಇರುತ್ತದೆ.

**ಪಾಟೀ ಸವಾಲು ಸಮಯ ಕೋರಿದ್ದು ಮುಂದೂಡಲಾಯಿತು.**

*(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)*

***ಓ.ಹೇ.ಕೆ.ಸರಿ ಇದೆ.***

***ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.***

**ಪಿರಿಯಾಪಟ್ಟಣ**